Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 21-10-2022

**ಪತ್ರಿಕಾ ಪ್ರಕಟಣೆ:**

# ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಉಪನ್ಯಾಸ ಕಾರ್ಯಕ್ರಮ

ಕೆ. ಎಲ್. ಎಸ್. ವಿ. ಡಿ. ಐ.ಟಿ. ಹಳಿಯಾಳದಲ್ಲಿ ಭಾರತದ ಸ್ಟಾರ್ಟಪ್ ದಿನದ ಅಂಗವಾಗಿ ಕೃತಕ ಬುದ್ಧಿಮತ್ತೆ ಮತ್ತು ಮಶಿನ್ ಲರ್ನಿಂಗ್(ಎ.ಐ ಮತ್ತು ಎಂ.ಎಲ್) ಕ್ಷೇತ್ರದಲ್ಲಿ ಉದ್ಯಮ ಪ್ರಾರಂಭಿಸಲು ಇರುವ ಅವಕಾಶಗಳ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಅಕ್ಟೋಬರ್ 21ರಂದು ಆಯೋಜಿಸಲಾಗಿತ್ತು. ಹುಬ್ಬಳ್ಳಿಯ ಡೋಕೆಟರ್ನ್ ಟೆಕ್. ಪ್ರೈ. ಲಿ. ನ ಸಂಸ್ಥಾಪಕರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ. ಅಜಯ್ ಕಬದಿ ಅವರು ಉಪನ್ಯಾಸಕರಾಗಿ ಆಗಮಿಸಿದ್ದರು.ಎ. ಐ. ಮತ್ತು ಎಂ. ಎಲ್. ತಂತ್ರಜ್ಞಾನವನ್ನು ಇತ್ತೀಚಿನ ದಿನಗಳಲ್ಲಿ  ಎಲ್ಲಾ ಕ್ಷೇತ್ರಗಳಲ್ಲೂ  ಬಳಸಲಾಗುತ್ತಿದೆ, ಈ ತಂತ್ರಜ್ಞಾನ ಕಲಿತ ವಿದ್ಯಾರ್ಥಿಗಳಿಗೆ ಹೇರಳ ಉದ್ಯೋಗಾವಕಾಶಗಳಿವೆ ಎಂದು ಹೇಳಿದರು.ಎ.ಐ. ಮತ್ತು ಎಂ. ಎಲ್. ತಂತ್ರಜ್ಞಾನವನ್ನು ಕಲಿಯುವುದು ಹೇಗೆ? ಮತ್ತು ಯಾವ ತಂತ್ರಾಂಶವನ್ನು ಬಳಸಬೇಕು ಎಂದು ವಿವರಿಸಿದರು. ಇ–ಮೇಲ್ ಗಳಲ್ಲಿ, ರೋಬೋಟ್ ಮತ್ತು ಮಾನವನ ಸಂವಹನ ಕ್ರಿಯೆಯಲ್ಲಿ ಈ ತಂತ್ರಜ್ಞಾನವನ್ನು ಬಳಸುತ್ತಿರುವ ಪರಿಯನ್ನು  ಸವಿಸ್ತಾರವಾಗಿ ವಿವರಿಸಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ  ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿಯವರು ತಾಂತ್ರಿಕ ಕ್ಷೇತ್ರದ ಅವಶ್ಯಕತೆ ಯನ್ನರಿತು  ಮಹಾವಿದ್ಯಾಲಯವು ಈ ವರ್ಷದಿಂದ ಎ. ಐ. ಮತ್ತು ಎಂ. ಎಲ್. ಇಂಜಿನಿಯರಿಂಗ್ ಕೋರ್ಸನ್ನು ಪ್ರಾರಂಭಿಸುತ್ತಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ಉತ್ತಮ ಉದ್ಯೋಗಾವಕಾಶ ಹೊಂದಲು ಈ ತಂತ್ರಜ್ಞಾನವನ್ನು ಕಲಿಯಬೇಕೆಂದು ಕರೆ ನೀಡಿದರು.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರು ಹಾಗೂ ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್ ಅವರು ಉಪನ್ಯಾಸಕರ ಕಿರುಪರಿಚಯದೊಂದಿಗೆ ಸಭಿಕರನ್ನು ಸ್ವಾಗತಿಸಿದರು. ಶೈಕ್ಷಣಿಕ ವಿಭಾಗದ ಡೀನ್ ಡಾ. ಶ್ರೀನಿವಾಸ್ ಎಸ್  ವಂದಿಸಿದರು. ಪ್ರೊ. ದೀಪಕ್ ಎಸ್  ನಿರೂಪಿಸಿದರು. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ; ಸಂಸ್ಥೆಗಳ ನಾವಿನ್ಯತಾ ಮಂಡಳಿ, ದೆಹಲಿ ಅಡಿಯಲ್ಲಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗವು  ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 80ಕ್ಕೂ ಅಧಿಕ ವಿದ್ಯಾರ್ಥಿಗಳು  ಪಾಲ್ಗೊಂಡಿದ್ದರು.

ಪ್ರಾಂಶುಪಾಲರು

**Principal**
**KLS Vishwanathrao Deshpande**
**Institute of Technology, Haliyal**


KLS VDIT, HALIYAL
Dr. V. A. Kulkarni,
Principal


KLS VDIT, HALIYAL
Celebration of
INDIA START-UP DAY